**ದಿನಾಂಕಃ 23.07.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ವಾಟೀ ಸವಾಲು ಃ- ಶ್ರೀ GHM ಆರೋಪಿ ಪರ ವಕೀಲರಿಂದ.**

ಆರೋಪಿಗೆ ರೂ.6 ಲಕ್ಷ ಹಣವನ್ನು ಒಂದೇ ಭಾರಿ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಒಂದು ಭಾರಿ ಚೆಕ್ ಮುಖಾಂತರ ರೂ.2 ಲಕ್ಷ ಹಾಗೂ ಒಂದು ಭಾರಿ ಆರೋಪಿಯ ತಂದೆಯವರು ರೂ.2 ಲಕ್ಷ ಹಣವನ್ನು ನಗಧಾಗಿ ಹಾಗೂ ಆರೋಪಿಯು ರೂ.2 ಲಕ್ಷ ಹಣವನ್ನು ನಗಧಾಗಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯ ತಂದೆಯವರು ಯಾವ ದಿನಾಂಕ, ತಿಂಗಳು ಮತ್ತು ಇಸವಿಯಂದು ಸದರಿ ರೂ.2 ಲಕ್ಷ ಹಣವನ್ನು ಪಡೆದಿರುತ್ತಾರೆ ಎಂದರೆ ಸಾಕ್ಷಿ ದಿನಾಂಕ, ತಿಂಗಳು ಮರೆತಿರುತ್ತೇನೆ, ಆದರೆ 2022 ನೇ ಇಸವಿಯಲ್ಲಿ ಎಂದು ನುಡಿಯುತ್ತಾರೆ. ಅದೇ ರೀತಿ ಆರೋಪಿಯು ಯಾವ ದಿನಾಂಕ, ತಿಂಗಳು ಮತ್ತು ಇಸವಿಯಂದು ಸದರಿ ರೂ.2 ಲಕ್ಷ ಹಣವನ್ನು ಪಡೆದಿರುತ್ತಾರೆ ಎಂದರೆ ಸಾಕ್ಷಿ ಮರೆತಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿಯ ತಂದೆಯವರಿಗೆ ರೂ. 2 ಲಕ್ಷ ಹಣವನ್ನು ಕೊಡುವಾಗ ಯಾರು ಯಾರು ಇದ್ದರು ಎಂದರೆ ಸಾಕ್ಷಿ ನಾನು, ಆರೋಪಿ ಮತ್ತು ಅವರ ತಂದೆ ಎಂದು ನುಡಿಯುತ್ತಾರೆ. ಆರೋಪಿಗೆ ರೂ.2 ಲಕ್ಷ ಹಣವನ್ನು ಕೊಡುವಾಗ ಯಾರು ಯಾರು ಇದ್ದರು ಎಂದರೆ ಸಾಕ್ಷಿ ನಾನು, ಆರೋಪಿ ಮತ್ತು ನನ್ನ ಪತ್ನಿ ಇದ್ದರು ಎಂದು ನುಡಿಯುತ್ತಾರೆ.

ಆರೋಪಿಗೆ ಮತ್ತು ಅವರ ತಂದೆಗೆ ರೂ.2 ಲಕ್ಷ ಹಣವನ್ನು ಚೆಕ್ ಮುಖಾಂತರ ಹಾಗೂ ರೂ.4 ಲಕ್ಷ ಹಣವಣನ್ನು ನಗಧು ರೂಪದಲ್ಲಿ ಕೊಟ್ಟಿರುತ್ತೇನೆ ಎಂದು ಪಿರ್ಯಾದಿಯಲ್ಲಿ ಮತ್ತು ನಿಮ್ಮ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿ ಬರೆಸಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಹಿಂದಿನ ಪಾಟೀಸವಾಲಿನಲ್ಲಿ ವೇಣುಗೋಪಾಲ್ ರವರು ತಮ್ಮ

ಮಗನಿಂದ ರೂ. 2 ಲಕ್ಷದಂತೆ ಒಟ್ಟು ಮೂರು ಚೆಕ್ ಅನ್ನು ಕೊಟ್ಟಿರುತ್ತಾರೆ ಎಂದು ಹೇಳಿದ್ದು ಇನ್ನು ಒಂದು ಚೆಕ್ ಎಲ್ಲಿ ಇರುತ್ತದೆ ಎಂದರೆ ಸಾಕ್ಷಿ 2 ಚೆಕ್ಕುಗಳನ್ನು ಮಾತ್ರ ಕೊಟ್ಟಿದ್ದು ಆದರೆ ತಪ್ಪಾಗಿ 3 ಚೆಕ್ಕು ಎಂದು ತಪ್ಪಾಗಿ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-1 ಚೆಕ್ಕಿನಲ್ಲಿ ನೀವೆ ಎಲ್ಲಾ ನಿಮ್ಮ ಇಷ್ಟದ ಹಾಗೆ ಬರೆದಿರುತ್ತೀರಿ ಎಂದರೆ ಸಾಕ್ಷಿ ಆರೋಪಿಯೇ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಚೆಕ್ಕು ಅಮಾನ್ಯವಾಗಿರುತ್ತದೆ ಎಂದು ನೀವು ವಕೀಲರ ಮೂಲಕ ಕಾನೂನು ತಿಳುವಳಿಕೆ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಕಾನೂನು ತಿಳುವಳಿಕೆಯನ್ನು ಯಾವ ವಿಳಾಸಕ್ಕೆ ಕಳುಹಿಸಿರುತ್ತೀರಿ ಎಂದು ಹೇಳಲು ಬರುತ್ತದೆಯೆ ಎಂದರೆ ಸಾಕ್ಷಿ ನನ್ನ ವಕೀಲರಿಗೆ ಗೊತ್ತು ಎಂದು ನುಡಿಯುತ್ತಾರೆ. ಸದರಿ ಕಾನೂನು ತಿಳುವಳಿಕೆಯನ್ನು ಆರೋಪಿಯು ಪಡೆದಿರುತ್ತಾರೋ ಅಥವಾ ಇಲ್ಲವೋ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿ ನಮ್ಮ ವಕೀಲರು ಕಾನೂನು ತಿಳುವಳಿಕೆಯನುನ ಪಡೆದಿರುವುದಿಲ್ಲ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯು ಸದರಿ ಕಾನೂನು ತಿಳುವಳಿಕೆಯಲ್ಲಿ ಇರುವ ಒಳ ವಿಳಾಸದಲ್ಲೆ ವಾಸ ಇದ್ದು ಹಾಗೂ ನ್ಯಾಯಾಲಯದಿಂದ ಸಮನ್ಸ್ ಸಹ ಅದೇ ವಿಳಾಸಕ್ಕೆ ಜಾರಿ ಆಗಿದುದ ನೀವು ಅಂಚೆ ಇಲಾಖೆಯವರೊಂದಿಗೆ ಶಾಮೀಲಾಗಿ ತಿರಸ್ಕರಿಸಿರುತ್ತಾರೆ ಎಂದು ಸುಳ್ಳು ಬರೆಸಿರತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಕಾನೂನು ತಿಳುವಳಿಕೆ ಆರೋಪಿಗೆ ಹಾರಿ ಆದರೆ ಮರುಉತ್ತರ ಕೊಡುತ್ತಾರೆ ಎಂದು ನೀವು ಅಂಚೆ ಇಲಾಖೆಯವರೊಂದಿಗೆ ಶಾವೀಲಾಗಿ ತಿರಸ್ಕರಿಸಿರುತ್ತಾರೆ ಎಂದು ಸುಳ್ಳು ಬರೆಸಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಿನಾಂಕ28.03.2019 ರಂದು ಆರೋಪಿಯ ಖಾತೆಗೆ ರೂ. 2 ಲಕ್ಷ ಹಣ ಹೋಗಿರುತ್ತದೆ ಎಂದು ನಿಮ್ಮ ಬ್ಯಾಂಕ್ ಸ್ಟೇಟ್ ಮೆಂಟ್ ಹಾಜರು ಪಡಿಸಿದ್ದು ಆ ರೀತಿ ಆರೋಪಿಗೆ ಯಾವುದೇ ಹಣ ಹೋಗಿರುವುದಿಲ್ಲ ನೀವು ಬ್ಯಾಂಕ್ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸದರಿ ಸ್ಟೇಟ್ ಮೆಂಟ್ ಅನ್ನು ಸೃಷ್ಟಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು

ನುಡಿಯುತ್ತಾರೆ. ನೀವು ಚೆಕ್ ಮುಖಾಂತರ ಹಣ ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ರೂ. 2 ಲಕ್ಷ ಹಣವನ್ನು ನಾನು ದಿನಾಂಕ 28.03.2019 ರಂದು ಚೆಕ್ ಮುಖಾಂತರ ಕೊಟ್ಟಿರುತ್ತೇನೆ ಎಂದು ನಿಮ್ಮ ದೂರಿನಲ್ಲಿ ಹೇಳಿರುತ್ತೀರಾ ಎಂದರೆ ಸಾಕ್ಷಿ ವಕೀಲರಿಗೆ ಗೊತ್ತು ಎಂದು ನುಡಿಯುತ್ತಾರೆ. ಸದರಿ ಚೆಕ್ ಅನ್ನು ಆರೋಪಿಯು ಯಾವ ಬ್ಯಾಂಕ್ ಗೆ ಹಾಜರು ಪಡಿಸಿ ಹಣ ವಿತ್ ಡ್ರಾ ಮಾಡಿರುತ್ತಾರೆ ಎಂದು ನಿಮಗೆ ಮಾಹಿತಿ ಇದೆಯೆ ಎಂದರೆ ಸಾಕ್ಷಿ ಕೆನರಾ ಬ್ಯಾಂಕ್ ಎಂದು ನುಡಿಯುತ್ತಾರೆ. ನೀವು ಹೇಳುವಂತೆ ರೂ.2ಲಕ್ಷ ಹಣ ಆರೋಪಿಗೆ ಕೊಟ್ಟಿರುವುದಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

ನಿಪಿ-7 ಮತ್ತು 8ರ ಪೋಟೋವನ್ನು ಯಾವ ಉದ್ದೇಶಕ್ಕಾಗಿ ಹಾಜರು ಪಡಿಸಿರುತ್ತೀರಿ ಎಂದರೆ ಸಾಕ್ಷಿ ಸದರಿ ಲಾಡ್ಜ್ ಅನ್ನು ಕಟ್ಟಲು ನಾನು ಹಣ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಲಾಡ್ಜ್ ಯಾರ ಮಾಲೀಕತ್ವಕ್ಕೆ ಇದೆ ಎಂದು ದಾಖಲೆಗಳನ್ನು ನೋಡಿರುತ್ತೀರಾ ಎಂದರೆ ಸಾಕ್ಷಿ ದಾಖಲೆಗಳನ್ನು ನೋಡಿರುವುದಿಲ್ಲ ಆದರೆ ನಾನು ಮತ್ತು ಆರೋಪಿಯ ತಂದೆಯವರು ಸ್ನೇಹಿತರು ಇದ್ದು ಅದರ ಆಧಾರದ ಮೇಲೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಲಾಡ್ಜ್ ಅನ್ನು ಯಾವ ವರ್ಷದಲ್ಲಿ ಕಟ್ಟಲು ಪ್ರಾರಂಭಿಸಿರುತ್ತಾರೆ ಹಾಗೂ ಯಾವ ವರ್ಷದಲ್ಲಿ ಮುಗಿಸಿರುತ್ತಾರೆ ಎಂದರೆ ಸಾಕ್ಷಿ 2018 ರಲ್ಲಿ ಪ್ರಾರಂಭಿಸಿ 2019 ಅಥವಾ 2020 ರಲ್ಲಿ ಮುಗಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಲಾಡ್ಜ್ ಆರೋಪಿಯ ಮಾಲೀಕತ್ವಕ್ಕೆ ಸೇರಿರುತ್ತದೆ ಎಂದು ದಾಖಲೆಗಳನ್ನು ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿ ವಕೀಲರಿಗೆ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನೀವು ಹಾಜರು ಪಡಿಸಿರುವ ಪೋಟೋಗಳಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಈ ಪ್ರಕರಣಕ್ಕೋಸ್ಕರ ಸೃಷ್ಟಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ ಲಾಡ್ಜ್ ಕಟ್ಟಲು ಹಣ ಕೊಡುತ್ತಿದ್ದೇನೆ ಎಂದು ಏನಾದರೂ ಕರಾರುಪತ್ರ ಮಾಡಿಕೊಂಡಿರುತ್ತೀರಾ ಎಂದರೆ ಸಾಕ್ಷಿ ಕರಾರುಪತ್ರ ಮಾಡಿಕೊಂಡಿರುವುದಿಲ್ಲ ಸ್ನೇಹಿತರಾದ ಕಾರಣ ಕೊಟ್ಟಿರುತ್ತೇವೆ ಎಂದು

ನುಡಿಯುತ್ತಾರೆ.

ನಿಮ್ಮ ಮಗನಾದ ವಿನಯ್ ಕುಮಾರ್ ರವರು ಆರೋಪಿ ವಿರುದ್ದ ಸಿಸಿ ನಂ.346/2024 ಮತ್ತು ಸಿಸಿ ನಂ .2344/2024 ಎಂದು 2 ಚೆಕ್ ಪ್ರಕರಣವನ್ನು ಹಾಕಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ 2 ಚೆಕ್ಕುಗಳಿಂದ ರೂ. 6 ಲಕ್ಷಗಳಿಗೆ ಪ್ರಕರಣವನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಅದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ದೊಡ್ಡ ಮಗ ರಾಜೀವ್ ರವರು ಆರೋಪಿಯ ವಿರುದ್ದ ಮಾನ್ಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ನಂ.30/2024 ರಂತೆ ರೂ.5 ಲಕ್ಷವೊತ್ತಕ್ಕೆ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಸದರಿ ವಿನಯ್ ಕುಮಾರ್ ರವರು ನೀಡಿದ ಕಾನೂನು ತಿಳುವಳಿಕೆಗೆ ಮರುಉತ್ತರ ಕೊಟ್ಟಿದ್ದು ಸದರಿ ಮರು ಉತ್ತರದಲ್ಲಿ 5 ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂದು ಹೇಳಿದ್ದು ಸದರಿ ವಿಷಯವನ್ನು ವಿನಯ್ ಕುಮಾರ್ ರವರು ನಿಮಗೆ ತಿಳಿಸಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿ ಮತ್ತು ನಿಮ್ಮ ಮಧ್ಯೆ ಯಾವುದೇ ವ್ಯವಹಾರ ಆಗಿರುವುದಿಲ್ಲ, ಆರೋಪಿಯ ತಂದೆಯು ಜೀವಂತ ಇದ್ದಾಗ ಅವರಿಂದ ಆರೋಪಿಯ ಚೆಕ್ ಅನ್ನು ಪಡೆದು ದುರುಪಯೋಗ ಪಡಿಸಿಕೊಂಡು ಆರೋಪಿ ವಿರುದ್ದ ಒಟ್ಟು 5 ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆರೋಪಿಯ ತಂದೆಯು ಜೀವಂತ ಇದ್ದಾಗ ಭದ್ರತೆಗಾಗಿ ಆರೋಪಿಯ ಚೆಕ್ಕುಗಳನ್ನು ಕೊಟ್ಟಿದ್ದನ್ನು ದುರುಪಯೋಗ ಪಡಿಸಿಕೊಂಡು ಆರೋಪಿ ವಿರುದ್ದ ಸುಳ್ಳು ದೂರನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನೀವಾಗಲಿ ನಿಮ್ಮ ಮಕ್ಕಳಾಗಲಿ ಫೈನಾನ್ಸ್ ನಡೆಸಲು ಪರವಾನಗಿ ಪಡೆದಿರುತ್ತೀರಾ ಎಂದರೆ ಸಾಕ್ಷಿ ನಾವು ಯಾವುದೇ ಫೈನಾನ್ಸ್ ನಡೆಸುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಯಾವುದೇ ಹಣವನ್ನು ಕೊಡಬೇಕಾಗದೇ ಇದ್ದರೂ ನೀವು ಮತ್ತು ನಿಮ್ಮ ಮಕ್ಕಳು ಆರೋಪಿಯ ವಿರುದ್ದ ಸುಳ್ಳು ದೂರುಗಳನ್ನು ದಾಖಲಿಸಿ ಸುಳ್ಳು

ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಮರು ವಿಚಾರಣೆ ಃ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**